# ಪರಮತ, ಪರಚಿಂತನೆ ಹಾಗೂ ಪರದರ್ಶನದಿಂದ ಮುಕ್ತರಾಗಿ ಪರೋಪಕಾರ ಮಾಡಿರಿ

ಇಂದು ದಿನ ಬಾಪ್ದಾದಾರವರು ನಮ್ಮ ನಾಲ್ಕು ಕಡೆಯ ತಂದೆಯ ಮಕ್ಕಳು ಯಾರು ಇದ್ದಾರೋ, ವಿಶೇಷ ಆತ್ಮರಿದ್ದಾರೋ ಆ ಸರ್ವ ವಿಶೇಷ ಆತ್ಮರನ್ನು ನೋಡುತ್ತಿದ್ದಾರೆ. ಅವರು ಭಾರತದವರಾಗಿರಲಿ, ಅಥವಾ ವಿದೇಶದವರಾಗಿರಲಿ, ಯಾವುದಾದರೂ ಮೂಲೆಯಲ್ಲಿರಲಿ ಆದರೆ ಬಾಪ್ದಾದಾರವರು ಸರ್ವ ವಿಶೇಷ ಆತ್ಮರನ್ನು ಸಮೀಪದಲ್ಲಿ ನೋಡುತ್ತಿದ್ದಾರೆ. ಅವರಿಗೆ ತಮ್ಮ ವಿಶೇಷ ಮಕ್ಕಳನ್ನು ನೋಡಿ ಹರ್ಷಿತವಾಗುತ್ತಿದೆ. ಹೇಗೆ ನಿಮಗೆ ಮಕ್ಕಳಿಗೆ ತಂದೆಯನ್ನು ನೋಡಿ ಖುಷಿಯಾಗುತ್ತದೆ ಅಲ್ಲವೇ! ಖುಷಿಯಾಗುತ್ತದೆಯೇ? ಆದ್ದರಿಂದಲೇ ಓಡೋಡಿ ಬಂದಿದ್ದೀರಲ್ಲವೇ. ನನ್ನ ಒಬ್ಬೊಬ್ಬ ಮಗು ವಿಶೇಷ ಆತ್ಮ ಆಗಿದ್ದಾರೆಂದು ತಂದೆಗೂ ಸಹ ಖುಷಿಯಾಗುತ್ತದೆ. ವೃದ್ಧರಾದ ಆತ್ಮರಾಗಿರಬಹುದು, ಅವಿದ್ಯಾವಂತರಾಗಿರಬಹುದು, ಸಣ್ಣ ಮಕ್ಕಳಾಗಿರಬಹುದು, ಯುವಕರಾಗಿರಬಹುದು, ಪ್ರವೃತ್ತಿಯವರಾಗಿರಬಹುದು. ಆದರೆ ಇಡೀ ವಿಶ್ವದ ಮುಂದೆ ವಿಶೇಷ ಆತ್ಮರಾಗಿದ್ದೀರಿ. ಎಷ್ಟೊಂದು ದೊಡ್ಡ ದೊಡ್ಡ ವೈಜ್ಞಾನಿಕರು ಚಮತ್ಕಾರವನ್ನು ತೋರಿಸುವವರು ಇದ್ದಾರೆ. ಚಂದ್ರ ಗ್ರಹದವರೆಗೂ ಹೋಗುವವರು ಇದ್ದಾರೆ ಆದರೆ ತಂದೆಯ ವಿಶೇಷ ಮಕ್ಕಳ ಮುಂದೆ ಅವರು ಸಹ ಅಜ್ಞಾನಿಗಳಾಗಿದ್ದಾರೆ. ಐದು ತತ್ವಗಳನ್ನು ತಿಳಿದುಕೊಂಡು ಬಿಟ್ಟರು, ಅವುಗಳ ಮೇಲೆ ವಿಜಯ ಮಾಡಿಕೊಂಡುಬಿಟ್ಟರು, ಆದರೆ ಅತಿ ಸಣ್ಣ ಬಿಂದುವಾದ ಆತ್ಮನನ್ನು ಅರಿತುಕೊಂಡಿದ್ದಾರೇನು? ಇಲ್ಲಿ ಸಣ್ಣ ಮಕ್ಕಳೊಂದಿಗೂ ನೀನು ಯಾರಾಗಿದ್ದೀಯ ಎಂದು ಕೇಳಿದರೆ ಏನು ಹೇಳುವರು? ನಾನು ಆತ್ಮನಾಗಿದ್ದೇನೆ ಎಂದು ಹೇಳುತ್ತಾರಲ್ಲವೆ. ಆತ್ಮವೂ ಎಲ್ಲಿರುತ್ತದೆ ಎಂದು ಕೇಳಿದರೆ ಅದನ್ನೂ ಹೇಳುವರು. ಆದರೆ ಆತ್ಮವೂ ಏನಾಗಿದೆ ಎಂದು ವೈಜ್ಞಾನಿಕರೊಂದಿಗೆ ಕೇಳಿರಿ ಅವರು ಇಲ್ಲಿಯವರೆಗೂ ಆತ್ಮದ ಜ್ಞಾನವನ್ನು ತಿಳಿದುಕೊಂಡಿರುವುದು ಅಸಂಭವವಾಗಿದೆ. ಚರಿತ್ರೆಯ ಗಣನೆಯಿಂದ, ಈ ಪ್ರಪಂಚದ ಗಣನೆಯಿಂದ ಅವರ ವಿಶೇಷ ಆತ್ಮವಿರಬಹುದು, ಆದರೆ ಯಾರು ತನ್ನನ್ನು ತಿಳಿದುಕೊಂಡಿಲ್ಲವೋ ಅವರಿಗಿಂತಲೂ ಇಲ್ಲಿಯ ಐದು ವರ್ಷದ ಮಗುವು ವಿಶೇಷ ಆತ್ಮ ಆಗಿಬಿಟ್ಟಿತು. ನಿಮ್ಮ ಯಜ್ಞದ ಪ್ರಾರಂಭದ ಸಮಯದ ತುಂಬಾ ನಶೆಯ ಗೀತೆ ಇದೆ. ಅದು ಯಾವ ಗೀತೆ ಆಗಿದೆ ಎನ್ನುವುದು ನೆನಪಿದೆಯೇ? ಎಷ್ಟೇ ದೊಡ್ಡ ಸಿರಿವಂತ ಮಾಲೀಕನಾಗಿದ್ದರೂ ಅವರು ಆತ್ಮನನ್ನು ತಿಳಿದುಕೊಂಡಿಲ್ಲ, ಆದ್ದರಿಂದ ಎಷ್ಟೇ ದೊಡ್ಡವರಾಗಿದ್ದರೂ, ನೇತಾ ಆಗಿದ್ದರೂ, ಅಭಿನೇತ ಆಗಿದ್ದರೂ ತನ್ನನ್ನು ತಾನು ತಿಳಿದುಕೊಂಡಿರದಿದ್ದರೆ ಏನು ತಿಳಿದುಕೊಂಡಂತಾಯಿತು? ಆದ್ದರಿಂದ ಇಂತಹ ವಿಶೇಷ ಆತ್ಮರಾಗಿದ್ದೀರಿ. ಇಲ್ಲಿಯ ಅವಿದ್ಯಾವಂತ ವೃದ್ಧ ಮಾತೆ ಒಂದು ಕಡೆ ಇದ್ದಾಳೆ ಹಾಗೂ ಇನ್ನೊಂದು ಕಡೆ ಒಬ್ಬ ಮಹಾತ್ಮರಿದ್ದಾರೆ. ಆದರೆ ವೃದ್ಧ ಮಾತೆಯು ನಶೆಯಿಂದ ಏನು ಹೇಳುತ್ತಾಳೆ - ನಾನು ಪರಮಾತ್ಮನನ್ನು ಪಡೆದು ಬಿಟ್ಟನು ಎಂದು. ವೃದ್ಧ ಮಾತೆಯರು ಹೀಗೆ ಹೇಳುತ್ತಿರಲ್ಲವೇ? ಹೇಳುತ್ತೀರಾ? ಆದರೆ ಮಹಾತ್ಮರು ಏನು ಹೇಳುತ್ತಾರೆ? ಪರಮಾತ್ಮನನ್ನು ಪಡೆಯುವುದು ತುಂಬಾ ಕಷ್ಟವಾಗಿದೆ ಎಂದು ಹೇಳುತ್ತಾರೆ. ಆದರೆ ಇಲ್ಲಿ ನೂರು ವರ್ಷದ ನೂರು ವರ್ಷದವರು ನಿಶ್ಚಯ ಬುದ್ಧಿಯುಳ್ಳವರಾಗಿದ್ದರೆ ಏನು ಹೇಳುತ್ತಾರೆ? ನೀವು ಹುಡುಕುತ್ತಲೇ ಇರಿ ನಾವಂತೂ ಪಡೆದುಬಿಟ್ಟೆವು ಎಂದು ಹೇಳುತ್ತಾರೆ. ಆದ್ದರಿಂದ ಮಹಾತ್ಮರು ಸಹ ನಿಮ್ಮ ಮುಂದೆ ಏನಾಗಿ ಬಿಟ್ಟರು? ಪ್ರವೃತ್ತಿಯಲ್ಲಿರುವವರು ನಶೆಯಿಂದ ಹೇಳುತ್ತಾರೆ - ನಾವು ಡಬಲ್ ಪಲ್ಲಂಗದ ಮೇಲೆಯೂ ಮಲಗುತ್ತೇವೆ ಆದರೂ ಸಹ ನಾವು ಪವಿತ್ರವಾಗಿದ್ದೇವೆ ಎಂದು ಹೇಳುತ್ತಾರೆ. ಅನೇಕರು ಡಬಲ್ ಸುಪ್ಪತ್ತಿಗೆಯ ಮೇಲೆ ಮಲಗುತ್ತಾರಲ್ಲವೇ. ದಂಪತಿಗಳು ಒಟ್ಟಿಗೆ ಇದ್ದರೂ ನಮ್ಮ ಮಧ್ಯದಲ್ಲಿ ತಂದೆ ಇದ್ದಾರೆ ಎಂದು ಹೇಳುತ್ತಾರೆ. ಆದರೆ ಮಹಾತ್ಮರು ಏನು ಹೇಳುತ್ತಾರೆ? ಬೆಂಕಿ ಹತ್ತಿಯು ಹೊಟ್ಟಿಗೆ ಇರುವುದು ಅಸಂಭವಾಗಿದೆ ಎಂದು ಹೇಳುತ್ತಾರೆ. ಆದರೆ ನಿಮಗೆ ಒಟ್ಟಿಗೆ ಇರುತ್ತಾ ಪವಿತ್ರವಾಗಿರೋದು ಏನಾಗಿದೆ? ಪ್ರವೃತ್ತಿಯವರು ಹೇಳಿರಿ ಪವಿತ್ರರಾಗಿರುವುದು ಕಷ್ಟವಾಗಿದೆಯೋ ಅಥವಾ ಸಹಜವಾಗಿದೆಯೋ? ಏನಾಗಿದೆ? ಸಹಜವಾಗಿದೆಯೋ ಅಥವಾ ಒಮ್ಮೊಮ್ಮೆ ಕಷ್ಟವಾಗಿ ಬಿಡುತ್ತದೆಯೋ? ಯಾರು ಪಕ್ಕಾ ಆಗಿದ್ದಾರೋ ಅವರು ದೊಡ್ಡ ಸಭೆಯ ಮಧ್ಯದಲ್ಲಿಯೂ ಸಹ ನಶೆಯಿಂದ ಹೇಳಿಬಿಡುತ್ತಾರೆ - ಪವಿತ್ರತೆಯಂತೂ ನಮ್ಮ ಸ್ವಧರ್ಮವಾಗಿದೆ ಎಂದು. ಪರಧರ್ಮವಲ್ಲ. ಸ್ವಧರ್ಮವಾಗಿದೆ. ಹೀಗೆ ಸ್ವಧರ್ಮವು ಸಹಜವಾಗಿರುತ್ತದೆಯೋ ಅಥವಾ ಕಷ್ಟವಾಗಿರುತ್ತದೆಯೋ. ಅಪವಿತ್ರತೆಯು ಪರಧರ್ಮವಾಗಿದೆ. ಆದರೆ ಪವಿತ್ರತೆಯು ಸ್ವಧರ್ಮವಾಗಿದೆ. ಹೀಗೆ ನಿಮ್ಮ ಈ ವಿಶೇಷತೆಯನ್ನು ಅರಿತುಕೊಂಡಿದ್ದೀರಲ್ಲವೇ? ಏಕೆಂದರೆ ಹೊಸ ಹೊಸಬರು ಸಹ ಅನೇಕ ಬಂದಿದ್ದಾರಲ್ಲವೇ. ಆದರೆ ಎಷ್ಟೇ ಹೊಸಬರಾಗಿದ್ದರು ಸಹ ಪವಿತ್ರತೆಯ ಪಾಠವಂತು ಪಕ್ಕಾ ಆಗಿದೆಯಲ್ಲವೇ? ಹಲವು ಮಕ್ಕಳು ಹೀಗೂ ಮಾಡುತ್ತಾರೆ ತಂದೆಯೊಂದಿಗೆ ಮಿಲನ ಮಾಡುವುದಕ್ಕೆ ಮುಂಚೆ ಒಂದು ವರ್ಷ ಪೂರ್ತಿ ಪವಿತ್ರವಾಗಿ ಇರಬೇಕೆಂಬ ಪಕ್ಕಾ ನಿಯಮವಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಮಧುಬನದಲ್ಲಿ ಬರುವವರಿಗೇನೋ ಸರಿಯಾಗಿರುತ್ತಾರೆ. ಆದರೆ ಮದುಬನದಲ್ಲಿ ಬಂದುಬಿಟ್ಟರು, ನೋಡಿಬಿಟ್ಟರು. ಆಮೇಲೆ ವಾಪಸ್ಸು ಹೋದ ಮೇಲೆ ಹುಡುಗಾಟಿಕೆಯಾಡುವವರೂ ಆಗಿಬಿಡುತ್ತಾರೆ. ಆದರೆ ಪವಿತ್ರತೆಯ ಪ್ರತಿಜ್ಞೆಯನ್ನು ಯಾರೊಂದಿಗೆ ಮಾಡಿದರು? ತಂದೆಯೊಂದಿಗೆ ಪ್ರತಿಜ್ಞೆ ಮಾಡಿ ಆಮೇಲೆ ಒಂದುವೇಳೆ ಎಚ್ಚರ ತಪ್ಪುವವರಾದರೆ ಯಾರಿಗೆ ನಷ್ಟವಾಗುವುದು? ಬ್ರಾಹ್ಮಣ ಪರಿವಾರದಲ್ಲಂತೂ ಒಬ್ಬರು ಹೋದರೆ ಹತ್ತು ಮಂದಿ ಬರುತ್ತಾರೆ ಆದರೆ ದುರ್ಬಲರಾಗುವ ಆ ಆತ್ಮರಿಗೆ ನಷ್ಟವಾಗುತ್ತದೆ. ಆದ್ದರಿಂದ ಯಾರು ಯಾರು ಹೊಸ ಹೊಸಬರು ಮೊದಲನೆಯ ಸಲ ಬಂದಿದ್ದೀರೋ ಅವರು ಕೈ ಎತ್ತಿರಿ. ಅನೇಕರಿದ್ದಾರೆ. ತಂದೆಯ ಮನೆಯಲ್ಲಿ ಬಂದುಬಿಟ್ಟಿರಿ

ಇದಂತೂ ಭಾಗ್ಯದ ಸಂಕೇತವಾಗಿದೆ. ಆದರೆ ಅದೃಷ್ಟದ ರೇಖೆಯನ್ನು ಎಂದು ಮೊಟಕು ಮಾಡಿಕೊಳ್ಳಬೇಡಿರಿ. ಅದೃಷ್ಟವನ್ನು ಉತ್ಕೃಷ್ಟವನ್ನಾಗಿ ಮಾಡಿಕೊಳ್ಳಿರಿ.

ಒಳ್ಳೆಯದು, ಎಷ್ಟು ಮಂದಿ ಬಂದಿದ್ದೀರೋ ಶಿಕ್ಷಕಿಯರೂ ಸಹ ಜೊತೆಯಲ್ಲಿ ಬಂದಿದ್ದಾರಲ್ಲವೇ. ಆದ್ದರಿಂದ ರೆಜಿಸ್ಟರ್ನಲ್ಲಿ ಎಲ್ಲರ ಹೆಸರಂತೂ ಇದ್ದೇ ಇದೆ. ರೆಸಿಸ್ಟರ್ನಲ್ಲಿ ನಿಮ್ಮ ಹೆಸರನ್ನು ಪಕ್ಕಾ ಮಾಡಿಕೊಂಡಿದ್ದೀರೋ ಅಥವಾ ಸ್ವಲ್ಪ ಕಚ್ಚಾ ಆಗಿದೆಯೋ? ಒಳ್ಳೆಯದು. ಯಾರು ಯಾರು ಹೊಸಬರು ಎಲ್ಲಿಂದಲಾದರೂ ಬಂದಿರಲಿ, ಶಿಕ್ಷಕಿಯರ ಬಳಿಯಂತೂ ಅವರ ಪಟ್ಟಿ ಇದ್ದೇ ಇದೆ. ಹಾಗೂ ಹಾಜರಿಯನ್ನೂ ಸಹ ಹಾಕುತ್ತಾರೋ ಅಥವಾ ಹಾಕುವುದಿಲ್ಲವೋ? ಯಾವ ಸೇವಾಕೇಂದ್ರದಲ್ಲಿ ಹಾಜರಿ ಗುರುತನ್ನು ಹಾಕುವುದಿಲ್ಲವೋ? ಅಂತಹ ಸೇವಾಕೇಂದ್ರವು ಯಾವುದಾದರೂ ಇದೆಯೇ? ಶಿಕ್ಷಕಿಯರು ಹೇಳಿರಿ. ಒಮ್ಮೊಮ್ಮೆ ನಿದ್ರೆ ಬರಬಹುದು, ಕ್ಲಾಸಿನಲ್ಲಿ ಬರಲು ಸಾಧ್ಯವಾಗಲಿಲ್ಲ. ಆದ್ದರಿಂದ ಪ್ರತಿದಿನವೂ ಹಾಜರಿ ಗುರುತು ಬೀಳುತ್ತದೆಯೇ? ಪ್ರತಿದಿನದ ರಿಜಿಸ್ಟರ್ ಹಾಗೂ ಹಾಜರಿ ಗುರುತು ಇದೆ ಎಂದು ಯಾವ ಶಿಕ್ಷಕಿಯರು ಹೇಳುತ್ತಾರೋ ಅವರು ಕೈ ಎತ್ತಿರಿ. ಒಳ್ಳೆಯದು ರೆಗ್ಯುಲರ್ ಆಗಿದ್ದಾರೋ ಅಥವಾ ಎರಡು ಮೂರು ದಿನ ತಪ್ಪಿಸಿಬಿಡುತ್ತಾರೋ. ನಿಗದಿ ಮಾಡಿದ್ದೀರಾ? ಎಲ್ಲವೂ ಶಿಕ್ಷಕಿಯರ ಬಳಿ ಇದ್ದರೆ ಚಪ್ಪಾಳೆ ತಟ್ಟಿರಿ. ಹಾಗಾದರೆ ಈಗೇನು ಮಾಡುವಿರಿ - 3-4 ಮಾಸದ ನಂತರ ನೀವು ಯಾರು ಹೊಸಬರನ್ನು ಕರೆತಂದಿದ್ದೀರೋ ಸೋದರರಾಗಿರಲಿ, ಸೋದರಿಯರಾಗಿರಲಿ ಎಷ್ಟು ಮಂದಿ ಹೊಸಬರು ಬಂದಿದ್ದರು ಅಷ್ಟು ಕಾಯಂ ಆಗಿ ಇದ್ದಾರೋ ಅಥವಾ ಎಲ್ಲಿಗಾದರೂ ಸುತ್ತು ಹಾಕಲು ಹೋಗಿದ್ದಾರೋ ಎನ್ನುವುದನ್ನು ತಿಳಿಸಿರಿ. ಏಕೆಂದರೆ ಮೊದಲು ಹೊಸದರಲ್ಲಿ ಸ್ವಲ್ಪ ನಶೆ ಇರುತ್ತದೆ ಆಮೇಲೆ ಕ್ರಮೇಣವಾಗಿ ಕಡಿಮೆಯಾಗುತ್ತದೆ. ಹೀಗೆ ನಾಲ್ಕು ತಿಂಗಳಿನ ನಂತರ ಎಷ್ಟು ಹೊಸಬರು ಅಷ್ಟು ಕಾಯಂ ಆಗಿ ಇದ್ದಾರೋ ಅಥವಾ ಸುತ್ತು ಹಾಕಲು ಎಲ್ಲಿಗಾದರೂ ಹೋಗಿದ್ದಾರೋ ಎನ್ನುವುದನ್ನು ತಿಳಿಸಿರಿ. ಹಲವರು ಸುತ್ತು ಹಾಕಲು ಹೋಗುತ್ತಾರೆ. ಎರಡು ವರ್ಷದ ಮಾಯೆ ಯಾತ್ರೆಯನ್ನು ಮಾಡಿ ಆಮೇಲೆ ಇಲ್ಲಿ ಬರುತ್ತಾರೆ. ಆದ್ದರಿಂದ ಫಲಿತಾಂಶವನ್ನು ಬರೆದು ಕಳಿಸಿರಿ. ಆದರೆ ಎಷ್ಟು ಶಬ್ದಗಳಲ್ಲಿ? ಕೇವಲ ಏನು ಬರೆಯಬೇಕೆಂದರೆ 60 ಮಂದಿ ಹೊಸಬರು ಬಂದರು ಹಾಗೂ 60 ಮಂದಿಯು ಇದ್ದಾರೆ ಅಥವಾ 60 ಮಂದಿ ಬಂದರು ಈಗ 40 ಮಂದಿ ಇದ್ದಾರೆ. ಹೀಗೆ ಕೇವಲ ಎರಡು ಶಬ್ದಗಳನ್ನು ಬರೆಯಿರಿ ಹಾಗೂ ಪ್ರತ್ಯೇಕವಾಗಿ ಬರೆಯಿರಿ. ಹಾಗೂ ವಿಶೇಷವಾಗಿ ರತನ್ಮೋಹಿನಿಯ ಹೆಸರು ಬರೆದು ಹೊರಗಡೆ ಬ್ರಹ್ಮಕುಮಾರಿ ಎಂದು ಬರೆಯಬೇಡಿರಿ. ಆದರೆ ದೊಡ್ಡ ದೊಡ್ಡ ಅಕ್ಷರಗಳಲ್ಲಿ ರತನ್ಮೋಹಿನಿ ಎಂದು ಬರೆದರೆ ಅವರದೊಂದು ತಿಳಿದುಕೊಳ್ಳುವರು. ಇಲ್ಲದಿದ್ದರೆ ಈಶೂನ ಬಳಿ ತುಂಬಾ ಪೋಸ್ಟ್ ಬಂದು ಬಿಡುತ್ತವೆ. ಎಷ್ಟು ವಿಶೇಷ ಆತ್ಮರು ತಮ್ಮ ವಿಶೇಷತೆಯನ್ನು ಪ್ರದರ್ಶಿಸುತ್ತಾರೆ ಎನ್ನುವುದನ್ನು ನೋಡುತ್ತಾರೆ. ಲೌಕಿಕದಲ್ಲಿಯೂ ಮಗು ಹುಟ್ಟಿದರೆ ಸದಾ ಜೀವಿಸಿರು ದೀರ್ಘಾಯುಸ್ಸುಳ್ಳವನಾಗು, ಚಿರಂಜೀವಿಯಾಗೂ ಎಂದು ಆಶೀರ್ವಾದ ಮಾಡುತ್ತಾರೆ. ಹಾಗೆಯೇ ಬಾಪ್ದಾದಾರವರೂ ಸಹ ವಿಶೇಷ ಆತ್ಮರ ಅವಿನಾಶೀ ವಿಶೇಷತೆಯನ್ನು ನೋಡಲು ಬಯಸುತ್ತಾರೆ. ಸ್ವಲ್ಪ ಸಮಯದ ವಿಶೇಷತೆಯನ್ನಲ್ಲ, ಒಂದು ವರ್ಷ ನಡೆಯುವುದು, ಎರಡು ವರ್ಷ ನಡೆಯುವುದಿಲ್ಲ ಅವಿನಾಶಿಯಾಗಿರುವವರಿಗೇ ಅವಿನಾಶೀ ಪ್ರಾಲಬ್ಧವು ಪ್ರಾಪ್ತಿಯಾಗುತ್ತದೆ. ಹೀಗೆ ಮಾತೆಯರು ಸಹ ಪಕ್ಕಾ ಆಗಿದ್ದೀರಾ? ಹೊಸದಾಗಿ ಬಂದಿರುವಂತಹ ಮಾತೆಯರೂ ಪಕ್ಕಾ ಆಗಿದ್ದೀರಾ? ಪಕ್ಕ ಆಗಿದಿರೋ ಅಥವಾ ಕಚ್ಚಾ ಆಗಿದ್ದೀರೋ - ಏನಾಗಿದ್ದೀರಿ? ಪಕ್ಕಾ ಆಗಿದ್ದೇವೆ ಎಂದು ಜೋರಾಗಿ ಹೇಳಿರಿ. ಏಕೆಂದರೆ ನೀವು ಒಂದು ವರ್ಷದ ಮಗುವಾಗಿರಬಹುದು ಅಥವಾ ಎರಡು ವರ್ಷದ ಮಗು ಆಗಿರಬಹುದು, ಅಥವಾ ನಾಲ್ಕು ವರ್ಷದವರಾಗಿರಬಹುದು, ಆದರೆ ಸಮಾಪ್ತಿಯಂತೂ ಒಂದೇ ಸಮಯದಲ್ಲಿ ಆಗುತ್ತದೆಯಲ್ಲವೇ. ವಿನಾಶವಂತೂ ಒಟ್ಟಿಗೆ ಎಲ್ಲರದೂ ಆಗುತ್ತದೆಯಲ್ಲವೇ. ಅಥವಾ ನಾವಂತೂ ಎರಡು ವರ್ಷದವರಾಗಿದ್ದೇವೆ, ನಮ್ಮದು ಸಿಲ್ವರ್ ಜೂಬಿಲಿ ಆಗಿ ಬಿಡಲಿ ಆಮೇಲೆ ವಿನಾಶವಾಗಲಿ ಎಂದು ನೀವು ಹೇಳುತ್ತಿರೋ. ಇದಂತೂ ಆಗುವುದಿಲ್ಲ ತಾನೇ. ಆದ್ದರಿಂದ ಹಿಂದೆ ಬಂದವರು ಇನ್ನೂ ಮುಂದೆ ಹೋಗಬೇಕು. ಸ್ವಲ್ಪ ಸಮಯದಲ್ಲಿ ತುಂಬಾ ಸಂಪಾದನೆ ಮಾಡಿಕೊಳ್ಳಲು ಸಾಧ್ಯವಿದೆ. ಇಷ್ಟಾದರೂ ನಿಮಗೆ ಪುರುಷಾರ್ಥದ ಸಲುವಾಗಿ ಸಮಯವು ದೊರೆತಿದೆ. ಮುಂದೆ ಹೋದಂತೆ ಇಷ್ಟು ಸಮಯವು ದೊರೆಯುವುದಿಲ್ಲ. ಈಗ ವೇಳೆ ಮೀರಿದೆ ಎನ್ನುವ ಬೋರ್ಡ್ ಹಾಕಲ್ಪಟ್ಟಿದೆ. ಆದರೆ ಅತಿ ತಡವಾಗಿದೆ ಎನ್ನುವ ಬೋರ್ಡ್ ಇನ್ನೂ ಹಾಕಲ್ಪಟ್ಟಿಲ. ಆದ್ದರಿಂದ ನೀವೆಲ್ಲರೂ ಅದೃಷ್ಟಶಾಲಿಯಾಗಿದ್ದೀರಿ. ಕೇವಲ ನಿಮ್ಮ ಭಾಗ್ಯವನ್ನು ಸ್ಮೃತಿಯಲ್ಲಿ ಇಟ್ಟುಕೊಂಡು ಮುನ್ನಡೆಯುತ್ತಾ ಹೋಗಿರಿ. ಯಾವುದೇ ಮಾತಿನಲ್ಲಿ ಹೋಗಬೇಡಿ.

ಇಂದು ಬಾಪ್ದಾದಾರವರು ಏನು ನೋಡುತ್ತಿದ್ದಾರೆಂದರೆ, ಮಕ್ಕಳ ಪುರುಷಾರ್ಥದ ಸಮಯವು ಏಕೆ ವ್ಯರ್ಥವಾಗಿ ಕಳೆದು ಹೋಗುತ್ತದೆ ಎನ್ನುವುದನ್ನು. ಯಾರೂ ವ್ಯರ್ಥವಾಗಲಿ ಎಂದು ಬಯಸುವುದಿಲ್ಲ. ನನ್ನ ಸಮಯವು ಸಫಲವಾಗಲಿ ಎಂದೇ ಎಲ್ಲರೂ ಬಯಸುತ್ತಾರೆ. ಆದರೆ ಮಧ್ಯೆ ಮಧ್ಯೆ ಒಮ್ಮೊಮ್ಮೆ ಅರ್ಧ ಘಂಟೆ, ಒಮ್ಮೊಮ್ಮೆ 15 ನಿಮಿಷ, ಒಮ್ಮೊಮ್ಮೆ 5 ನಿಮಿಷ ವ್ಯರ್ಥವಾಗಿ ಕಳೆದು ಹೋಗಿ ಬಿಡುತ್ತದೆ. ಅದರ ಕಾರಣವು ಏನಾಗಿದೆ? ಈ ದಿನ ಬಾಪ್ದಾದಾರವರು ಏನು ನೋಡಿದರೆಂದರೆ ಮೆಜಾರಿಟಿ (ಅಧಿಕ ಸಂಖ್ಯೆಯ) ಮಕ್ಕಳ ವಿಶೇಷ ಪುರುಷಾರ್ಥವು ಏನು ಕಡಿಮೆಯಾಗುತ್ತದೆಯೋ ಅಥವಾ ಮಂದಗತಿಯದಾಗುತ್ತದೆಯೋ ಅದಕ್ಕೆ ಮೂರು ಕಾರಣಗಳಿವೆ. ಮುಂದೆಯೂ ತಿಳಿಸಿಕೊಟ್ಟಿದ್ದಾರೆ. ಇದೇನೂ ಹೊಸ ವಿಚಾರವಲ್ಲ. ಆದರೆ, ಡೈಮಂಡ್ ಜೂಬಿಲಿಯಲ್ಲಿ ವಿಶೇಷವಾಗಿ ಏನು ಗಮನ ಕೊಡಬೇಕೋ ಅದನ್ನು ಬಾಪ್ದಾದಾರವರು ಮುಂಚಿತವಾಗಿಯೇ ಹೇಳುತ್ತಾ ಇದ್ದಾರೆ. ಮೂರು ಕಾರಣಗಳು ಏನಾಗಿವೆಯೆಂದರೆ - ಮೊದಲನೆಯದಾಗಿ ನಡೆಯುತ್ತಾ ನಡೆಯುತ್ತಾ, ಶ್ರೀಮತದ ಜೊತೆಯಲ್ಲಿ ಆತ್ಮರ

ಪರಮತವನ್ನು ಬೇರಕೆ ಮಾಡಿಬಿಡುತ್ತಾರೆ. ಯಾರಾದರೂ ಏನಾದರೂ ಹೇಳಿದರೆ, ಹೇಳುವವರು ಒಳ್ಳೆಯ ಸತ್ಯವಾದ ಮಹಾರಥಿಯಾಗಿದ್ದರೆಂದು ನೀವು ತಿಳಿದುಕೊಳ್ಳುತ್ತೀರಿ. ಹಾಗೂ ನಿಮಗೆ ಅವರಲ್ಲಿ ವಿಶ್ವಾಸವೂ ಇದೆ. ಯಾವಾಗ ಇಂತಹ ಆತ್ಮನು ಯಾರಾದರೂ ನಿಮಗೆ ಏನಾದರೂ ಅಂತಹ ಸಂಗತಿಗಳನ್ನು ತಿಳಿಸುತ್ತಾರೆ. ಅದರಲ್ಲಿ ನಿಮಗೆ ಆಸಕ್ತಿಯೂ ಉಂಟಾಗುತ್ತದೆ. ಸಮಾಚಾರವಂತೂ ಒಳ್ಳೆಯದಾಗಿದೆ. ಪ್ರಪಂಚದ ಸಮಾಚಾರವೂ ಹೇಗೆ ಚೆನ್ನಾಗಿದೆಯೆನಿಸುತ್ತದೆಯೋ ಹಾಗೆಯೇ ಬ್ರಾಹ್ಮಣ ಜಗತ್ತಿನ ಸಮಾಚಾರವೂ ಸಹ ಕೇಳಲು ಚೆನ್ನಾಗಿದೆ ಎನ್ನಿಸುತ್ತದೆ. ಆದ್ದರಿಂದ ನೀವು ಅವರ ಬಗ್ಗೆ ನಂಬಿಕೆಯಿಟ್ಟು ಆ ಸುದ್ದಿಯನ್ನು ನಿಮ್ಮ ಮನಸ್ಸಿನೊಳಗೆ ತುಂಬಿಕೊಳ್ಳುತ್ತೀರಿ. ಅವರು ಹೇಳುವುದಕ್ಕೆ ಅಡ್ಡಿ ಮಾಡುವುದಿಲ್ಲ. ಕೇಳಿ ಮನಸ್ಸಿನಲ್ಲಿ ಇಟ್ಟುಕೊಂಡರೆ ಆ ಸಂಗತಿಯು ಸತ್ಯವೂ ಆಗಿರಬಹುದು, ಎಲ್ಲಾ ಸಮಾಚಾರಗಳೂ ಸುಳ್ಳಾಗಿರುವುದಿಲ್ಲ. ಸತ್ಯವಾದವೂ ಇರುತ್ತದೆ. ಆದರೆ ತಂದೆಯ ಆದೇಶವು ಏನಿದೆ? ಇಂತಹ ಸಮಾಚಾರವನ್ನು ಕೇಳಲು ಅಡ್ಡಿಯಿಲ್ಲ ಎಂದು ಹೇಳುತ್ತೇವೇನು? ಇಲ್ಲ. ಯಾವುದರೊಂದಿಗೆ ನಿಮಗೆ ಏನೂ ಸಂಬಂಧವಿಲ್ಲವೋ, ಕೇವಲ ಮನರಂಜನೆ ಮಾಡುವ ಸಮಾಚಾರ ಆಗಿದೆಯೋ, ನೀವು ಅದರ ಬಗ್ಗೆ ಏನು ಮಾಡಲು ಸಾಧ್ಯವಿಲ್ಲವೋ ಅದನ್ನು ಕೇಳಿ ಏನೂ ಮಾಡಲು ಸಾಧ್ಯವಿಲ್ಲದಿದ್ದರೆ ಸಮಾಚಾರವು ಎಲ್ಲಿಗೆ ಹೋಗುವುದು. ಬುದ್ಧಿಯಲ್ಲಿಯಂತೂ ಧಾರಣೆಯಾಯಿತು. ಸಮಯವು ವ್ಯರ್ಥವಾಯಿತೋ ಇಲ್ಲವೋ? ಹಾಗೂ ತಂದೆಯ ಶ್ರೀಮತದಲ್ಲಿ ಪರಮತವನ್ನು ಏಕೆ ಬೆರಕೆ ಮಾಡಿದಿರಿ? ಏಕೆಂದರೆ ತಂದೆಯ ಆಜ್ಞೆಯು ಏನಿದೆಯೆಂದರೆ - ಕೇಳುತ್ತಿದ್ದರೂ ಕೇಳಬೇಡಿರಿ ಎಂದು. ಆದ್ದರಿಂದ ನೀವು ಏಕೆ ಕೇಳಿದಿರಿ? ಅದರ ಅಭ್ಯಾಸ ಮಾಡಿಕೊಂಡಿರಿ. ಯಾರಾದರೂ ಒಂದುಸಲ ನಿಮಗೆ ಸಮಾಚಾರವನ್ನು ಹೇಳಿದರೂ, ನಿಮಗೂ ಅದು ತುಂಬಾ ಚೆನ್ನಾಗಿದೆ ಎನ್ನಿಸಿತು. ಹೊಸ ಸಂಗತಿಯಾಗಿದೆ. ಹೀಗೂ ಆಗುತ್ತದೆ ಎನ್ನುವುದು ಗೊತ್ತಾಗಿ ಬಿಟ್ಟಿತು. ಆದರೆ ಒಂದುವೇಳೆ ಒಂದು ಸಲ ನೀವು ಅವರ ಮಾತನ್ನು ಕೇಳಿದರೆ, ಇನ್ನೊಂದು ಸಲ ಅವರು ಎಲ್ಲಿಗೆ ಹೋಗುವರು? ನಿಮ್ಮ ಬಳಿ ಬರುವರು. ನೀವು ಅವರ ಪಾಲಿಗೆ ಕಸದ ಡಬ್ಬಿ ಆಗಿಬಿಟ್ಟಿರಲ್ಲವೇ. ಅಂತಹ ಸಮಾಚಾರಗಳು, ಏನಿದ್ದರೂ ಅವರು ನಿಮ್ಮ ಬಳಿಯೇ ಬಂದು ತಿಳಿಸುವರಲ್ಲವೇ, ಏಕೆಂದರೆ ನೀವು ಕೇಳುವಿರಿ. ಆದ್ದರಿಂದ ಅವರಿಗೆ ನೀವು ತಿಳಿವಳಿಕೆ ನೀಡಿ ಅಂತಹ ಹವ್ಯಾಸಗಳಿಂದ ಅವರನ್ನೂ ಮುಕ್ತರನ್ನಾಗಿ ಮಾಡಿರಿ. ಅವರು ಹೇಳುವುದನ್ನು ಕೇಳಿ ಆಸಕ್ತಿಯನ್ನು ದ್ವಿಗುಣಗೊಳಿಸಬೇಡಿರಿ. ಆದರೆ ಒಂದುವೇಳೆ ಕೇಳಿದ ಮೇಲೆ ಏನಾದರೂ ಮಾಡಲು ಸಾಧ್ಯವಿದ್ದರೆ ಮಾಡಿರಿ, ಅಥವಾ ನಿಮ್ಮಲ್ಲಿ ಅಷ್ಟು ಶಕ್ತಿಯಿದ್ದರೆ ಅವರಿಗೂ ಸದಾ ಕಾಲದವರೆಗೆ ಫುಲ್ ಸ್ಟಾಪ್ ಹಾಕಿಬಿಡಿ. ನಿಮ್ಮ ಆಂತರ್ಯದಲ್ಲಿಯೂ ಸಹ ಫುಲ್ ಸ್ಟಾಪ್ ಹಾಕಿರಿ. ಸಂಪೂರ್ಣವಾಗಿ ಆ ವ್ಯಕ್ತಿಯಿಂದ, ದೃಷ್ಟಿಯಿಂದ ಸಮಾಚಾರವನ್ನು ಕೇಳುವ ಆತ್ಮನ ಬಗ್ಗೆ ಸಂಕಲ್ಪವು ತಿರಸ್ಕಾರ ಭಾವದ್ದಾಗಿರಬಾರದು, ನಿಮ್ಮಲ್ಲಿ ಇಷ್ಟು ಶಕ್ತಿಯಿದ್ದರೆ, ಇದು ಕೇಳುವುದಾಗಲಿಲ್ಲ, ಅವರ ಕಲ್ಯಾಣ ಮಾಡಿದಂತಾಯಿತು. ಆದರೆ ಫಲಿತಾಂಶದಲ್ಲಿ ಏನು ನೋಡಲಾಗುತ್ತದೆಯೆಂದರೆ, ಮೆಜಾರಿಟಿ (ಅಧಿಕ ಸಂಖ್ಯೆಯ) ಮಕ್ಕಳು ಸ್ವಲ್ಪ ಸ್ವಲ್ಪ ಕಸವನ್ನು ತುಂಬಿಕೊಳ್ಳುತ್ತಾ ತುಂಬಿಕೊಳ್ಳುತ್ತಾ ತಿರಸ್ಕಾರ ಭಾವವು ಉತ್ಪನ್ನವಾಗಿ ಬಿಡುತ್ತದೆ ಅಥವಾ ನಡೆ-ನುಡಿಯಲ್ಲಿ ವ್ಯತ್ಯಾಸವಾಗಿ ಬಿಡುತ್ತದೆ. ಬೇರೆ ಏನೂ ಆಗದಿದ್ದರೂ ಆ ಆತ್ಮನ ಬಗ್ಗೆ ಸೇವೆ ಮಾಡುವ ಭಾವನೆಯಿರುವುದಿಲ್ಲ. ಭಾರೀತನವಿರುತ್ತದೆ. ಇದನ್ನು ಶ್ರೀಮತದಲ್ಲಿ ಪರಮತವನ್ನು ಬೆರಕೆ ಮಾಡುವುದೆಂದು ಕರೆಯಲಾಗುತ್ತದೆ. ಸ್ಪಷ್ಟವಾಯಿತೇ? ಏನಾಗುತ್ತದೆಯೆಂದರೆ ಸಮಾಚಾರವನ್ನೇನೋ ಬಾಪ್ದಾದಾರವರೂ ಕೇಳುತ್ತಾರೆ. ಮೆಜಾರಿಟಿಯ ಭಾವವು ಬದಲಾವಣೆಯಾಗಿ ಬಿಡುತ್ತದೆ. ಹೇಳುವುದರಲ್ಲಿಯೂ ಭಾವವು ಬದಲಾಗಿ ಬಿಡುತ್ತದೆ. ಒಬ್ಬರು ಬಂದು ಇವರಿಬ್ಬರೂ ಮಾತನಾಡುತ್ತಿದ್ದುದನ್ನು ನಾನು ನೋಡಿದೆನೆಂದು ಹೇಳುತ್ತಾರೆ ಹಾಗೂ ಒಬ್ಬರು ಹೇಳಿದುದನ್ನು ಕೇಳಿ ಇನ್ನೊಬ್ಬರು ಹೇಳುತ್ತಾರೆ - ಇಲ್ಲ ಅವರು ನಿಂತುಕೊಂಡೂ ಇದ್ದರು ಹಾಗೂ ತುಂಬಾ ಒಳ್ಳೆಯ ತರಹವಾಗಿ ನಿಂತುಕೊಂಡಿರಲಿಲ್ಲ. ಇದು ಇನ್ನೊಂದು ಅಡಿಷನ್ (ಸೇರ್ಪಡೆ) ಆಯಿತು. ಆಮೇಲೆ ಮೂರನೆಯವರು ಏನು ಹೇಳುತ್ತಾರೆಂದರೆ - ಇವರದಂತೂ ಇದು ಇದ್ದೇ ಇರುತ್ತದೆ. ಭಾವವು ಎಷ್ಟು ಬದಲಾಗಿ ಬಿಟ್ಟಿತು. ಅವರ ಭಾವನೆಯು ಏನಿರುತ್ತದೆ ಹಾಗೂ ಮಾತುಗಳಲ್ಲಿ ಭಾವವು ಎಷ್ಟು ಬದಲಾಗಿ ಬಿಡುತ್ತದೆ. ಹೀಗೆ ಈ ಪರಮತವು ವಾಯುಮಂಡಲವನ್ನು ಕಲುಷಿತ ಮಾಡಿಬಿಡುತ್ತದೆ. ಹೀಗೆ ಸಮಯವು ಏನು ವ್ಯರ್ಥವಾಗುತ್ತದೆಯೋ ಅದರ ಒಂದು ಕಾರಣವು ಪರಮತವಾಗಿದೆ. ಹಾಗೂ ಎರಡನೆಯ ಕಾರಣವು ಪರಚಿಂತನೆಯಾಗಿದೆ. ಒಬ್ಬರಿಂದ ಏನಾದರೂ ಸಮಾಚಾರವನ್ನು ಕೇಳಿದರೆ, ಎಂಟು-ಹತ್ತು ಮಂದಿಗೆ ಹೇಳದಿರುವುದು ಅಸಂಭವ. ಒಂದುವೇಳೆ ಯಾರದರೂ ದೂರದೇಶದಲ್ಲಿದ್ದರೂ ಸಹ ಅವರಿಗೆ ಇಲ್ಲಿ ತುಂಬಾ ಹೊಸ ಘಟನೆಯು ನಡೆದಿದೆ ನೀವು ಬಂದರೆ ಅವಶ್ಯವಾಗಿ ತಿಳಿಸುವೆನು ಎಂದು ಪತ್ರದಲ್ಲಿಯೂ ಬರೆದು ಬಿಡುವರು. ಆದ್ದರಿಂದ ಇದು ಏನಾಗಿಬಿಟ್ಟಿತು? ಪರಚಿಂತನೆ. ನೀವು ನಾಲ್ಕು ಮಂದಿಗೆ ತಿಳಿಸಿದರೆ ಆ ನಾಲ್ವರ ಭಾವನೆಯನ್ನು ಆ ಆತ್ಮನ ಬಗ್ಗೆ ನೀವು ಕೆಡಿಸಿಬಿಟ್ಟಿರಲ್ಲವೇ ಹಾಗೂ ಪರಚಿಂತನೆಯು ಪ್ರಾರಂಭವಾದರೆ ಇದರ ಗತಿಯು ತುಂಬಾ ತೀವ್ರವಾಗಿಯೂ ಇರುತ್ತದೆ ಹಾಗೂ ದೀರ್ಘಕಾಲದ್ದೂ ಆಗಿರುತ್ತದೆ.

ಪರಚಿಂತನೆಯು ಒಂದು ಸೆಕೆಂಡಿನಲ್ಲಿ ಪೂರ್ತಿಯಾಗುವುದಿಲ್ಲ. ಹೇಗೆ ಬಾಪ್ದಾದಾರವರು ಹೇಳುತ್ತಾರಲ್ಲವೇ - ಯಾರಿಗಾದರೂ ಜ್ಞಾನವನ್ನು ತಿಳಿಸಿಕೊಟ್ಟರೆ ಅವರಿಗೆ ಆಸಕ್ತಿಯನ್ನುಂಟು ಮಾಡುವ ಸಲುವಾಗಿ ಅದನ್ನು ಕಥೆಯ ರೀತಿಯಿಂದ ಹೇಳಿರಿ ಎಂದು. ಮೊದಲು ಇದು ಆಯಿತು. ಆಮೇಲೆ ಏನಾಯಿತು, ಆಮೇಲೆ ಏನಾಯಿತು .... ಎಂದು ಹೇಳುತ್ತೀರಿ. ಹಾಗೆಯೇ ಈ ಕಥೆಯೂ ಸಹ ತುಂಬಾ ದೀರ್ಘವಾಗಿದೆ. ಬಾಪ್ದಾದಾರಂತೂ ಸರ್ವರ ಮನಸ್ಸಿನ ವಿಚಾರಗಳನ್ನು ಕೇಳಿಯೂ ಕೇಳುತ್ತಾರೆ, ನೋಡಿಯು ನೋಡುತ್ತಾರೆ. ಯಾರು ಎಷ್ಟೇ ಬಚ್ಚಿಟ್ಟುಕೊಳ್ಳಲು ಪ್ರಯತ್ನ ಮಾಡಿದರೂ ಕೇವಲ ಬಾಪ್ದಾದಾರವರು ಒಮ್ಮೊಮ್ಮೆ ಲೋಕ ಸಂಗ್ರಹಾರ್ಥವಾಗಿ ಬಹಿರಂಗವಾಗಿ ಸೂಚನೆ ಆದೇಶ ನೀಡುವುದಿಲ್ಲ. ಆದರೆ ಎಲ್ಲವನ್ನೂ ನೋಡುತ್ತಾರೆ. ಆದರೆ ಎಲ್ಲವನ್ನೂ

ತಿಳಿದುಕೊಳ್ಳುತ್ತಾರೆ, ಎಲ್ಲವನ್ನೂ ನೋಡುತ್ತಾರೆ. ನಾನಂತೂ ಎಂದು ಮಾಡುವುದಿಲ್ಲ ಎಂದು ಯಾರಾದರೂ ಎಷ್ಟೇ ಹೇಳಿದರೂ ಸಹ ಬಾಪ್ದಾದಾರ ಬಳಿ ರೆಜಿಸ್ಟರ್ (ಕರ್ಮಗಳ ಖಾತೆ) ಇದೆ. ಯಾರು ಏನೇನು ಮಾಡಿದರು, ಎಷ್ಟು ಸಲ ಮಾಡಿದರು, ಯಾವ ಸಮಯದಲ್ಲಿ ಮಾಡಿದರು, ಎಷ್ಟು ಮಂದಿಯೊಂದಿಗೆ ಮಾಡಿದರು ಎನ್ನುವುದೆಲ್ಲದರ ರಜಿಸ್ಟರ್ ಇದೆ. ಕೇವಲ ಒಮ್ಮೊಮ್ಮೆ ಸುಮ್ಮನಿರಬೇಕಾಗುತ್ತದೆ. ಹೀಗೆ ಎರಡನೆಯ ಕಾರಣವು ಪರಚಿಂತನೆಯಾಗಿದೆ. ಪರಚಿಂತನೆ ಮಾಡುವವರ ಆಂತರ್ಯದಲ್ಲಿ ಸ್ವಚಿಂತನೆಯು ಎಂದೂ ನಡೆಯುವುದಿಲ್ಲ. ಏನಾದರೂ ತಪ್ಪು ಆದರೆ, ಪರಚಿಂತನೆ ಮಾಡುವವರು. ತಮ್ಮ ದೋಷವನ್ನು ಬೇರೆಯವರ ಮೇಲೆ ಹೊರಿಸುವರು. ಹಾಗೂ ಪರಚಿಂತನೆ ಮಾಡುವವರು ಕಥೆ ಕಟ್ಟುವುದರಲ್ಲಿ ನಂಬರ್ಒನ್ ಆಗಿರುತ್ತಾರೆ, ಪೂರ್ಣವಾಗಿ ತಮ್ಮ ತಪ್ಪನ್ನು ಅನ್ಯರದೆಂದು ಹೇಗೆ ಸಿದ್ಧ ಮಾಡುತ್ತಾರೆಂದರೆ ಅದನ್ನು ಕೇಳುವ ಹಿರಿಯರೂ ಸಹ ಸುಮ್ಮನಿರಬೇಕಾಗುತ್ತದೆ. ಆದ್ದರಿಂದ ಕೇವಲ ಜ್ಞಾನದ ಪಾಯಿಂಟ್ಸನ್ನು ಹೇಳುವುದು ಕೇಳುವುದನ್ನು ಸ್ವಚಿಂತನೆಯೆಂದು ಕರೆಯುವುದಿಲ್ಲ. ಕೇವಲ ಇದೇ ಸ್ವಚಿಂತನೆಯಲ್ಲ. ಆದರೆ ಸ್ವಚಿಂತನೆ ಅರ್ಥಾತ್ ನಿಮ್ಮ ಸೂಕ್ಷ್ಮವಾದ ಲೋಪ ದೋಷಗಳನ್ನು, ಸಣ್ಣಪುಟ್ಟ ತಪ್ಪುಗಳನ್ನು ದೌರ್ಬಲ್ಯಗಳನ್ನು ಚಿಂತನೆ ಮಾಡಿ ನಿರ್ಮೂಲ ಮಾಡುವುದಾಗಿದೆ. ಪರಿವರ್ತನೆ ಮಾಡಿಕೊಳ್ಳುವುದು ಸ್ವಚಿಂತನೆಯಾಗಿದೆ. ಬಾಕಿ ಜ್ಞಾನವನ್ನು ಕೇಳುವುದು ಹಾಗೂ ಹೇಳುವುದರಲ್ಲಿಯಂತೂ ಎಲ್ಲರೂ ಬುದ್ಧಿವಂತರಾಗಿದ್ದೀರಿ. ಅದು ಜ್ಞಾನದ ಚಿಂತನೆಯಾಗಿದೆ, ಮನನವಾಗಿದೆ. ಆದರೆ ಸ್ವಚಿಂತನೆಯ ಸೂಕ್ಷ್ಮವಾದ ಅರ್ಥವು ನಿಮ್ಮ ಬಗ್ಗೆ ಆಗಿದೆ. ಏಕೆಂದರೆ, ಯಾವಾಗ ಫಲಿತಾಂಶವು ಪ್ರಕಟವಾಗುವುದೋ ಆಗ ಇವರು ಜ್ಞಾನದ ಮನನವನ್ನು ಚೆನ್ನಾಗಿ ಮಾಡಿದರೇನು ಅಥವಾ ಸೇವೆಯಲ್ಲಿ ಜ್ಞಾನವನ್ನು ಚೆನ್ನಾಗಿ ಉಪಯೋಗ ಮಾಡಿದರೇ ಎಂಬುದನ್ನು ಫಲಿತಾಂಶದಲ್ಲಿ ಗಮನಿಸುವುದಿಲ್ಲ. ಈ ಫಲಿತಾಂಶಕ್ಕೆ ಮುಂಚೆ ಸ್ವಚಿಂತನೆ ಮಾಡಬೇಕು ಹಾಗೂ ಪರಿವರ್ತನೆ ಮಾಡಿಕೊಳ್ಳಬೇಕು. ಸ್ವಚಿಂತನೆ ಮಾಡುವುದರ ಅರ್ಥವೇ ಪರಿವರ್ತನೆ ಮಾಡಿಕೊಳ್ಳುವುದಾಗಿದೆ. ಕೇವಲ ಚಿಂತನೆಯಲ್ಲ - ನನ್ನಲ್ಲಿ ಈ ಅವಗುಣವಿದೆ, ಈ ಲೋಪ ದೋಷವಿದೆ, ಇರುವುದೇನೋ ಇದೆ. ಆದರೆ ಕೇವಲ ವಿಚಾರ ಮೂಡುವುದು ಸಚಿಂತನೆಯಲ್ಲ. ಸ್ವಚಿಂತನೆ ಅರ್ಥಾತ್ ಪರಿವರ್ತನೆ, ಹೀಗೆ ಫಲಿತಾಂಶದಲ್ಲಿ ಬಾಪ್ದಾದಾರವರು ತಿಳಿಸಿಕೊಡುವುದೇನೆಂದರೆ ಯಾವಾಗ ಫೈನಲ್ ರಿಜಲ್ಟ್ (ಅಂತಿಮ ಫಲಿತಾಂಶವು ಪ್ರಕಟವಾಗುವುದೋ ಆದರಲ್ಲಿ ಮೊದಲು ಮಾರ್ಕ್ಸ್ (ಅಂಕಗಳು) ಪ್ರಾಕ್ಟಿಕಲ್ (ನಿತ್ಯ ಜೀವನದಲ್ಲಿ) ಧಾರಣಾ ಸ್ವರೂಪ ಆಗಿರುವುದಕ್ಕೆ ದೊರೆಯುವುದು. ಯಾರು ಧಾರಣಾ ಸ್ವರೂಪ ಆಗಿರುವರೋ ಅವರು ಸ್ವಾಭಾವಿಕ ಯೋಗಿಯಂತೂ ಆಗಿಯೇ ಇರುವರು. ಒಂದುವೇಳೆ ಅಧಿಕ ಮಾರ್ಕ್ಸ್ (ಅಂಕಗಳನ್ನು) ತೆಗೆದುಕೊಳ್ಳಬೇಕೆಂದಿದ್ದರೆ ಮೊದಲು ಏನು ಅನ್ಯರಿಗೆ ತಿಳಿಸಿಕೊಡುತ್ತೀರೋ ಅದರ ಧಾರಣಾ ಸ್ವರೂಪ ಆಗಿರಿ. ಈಗಿನ ಸಮಯದಲ್ಲಿ ಭಾಷಣವನ್ನು ಯಾವ ವಿಷಯದ ಬಗ್ಗೆ ಮಾಡುತ್ತೀರಿ? ವೇಲ್ಯೂಸ್ (ಮೌಲ್ಯಗಳು) ಬಗ್ಗೆ ಮಾಡುತ್ತೀರಿ, ಹೀಗೆ ಅನ್ಯರಿಗೆ ಮೌಲ್ಯಗಳ ಬಗ್ಗೆ ಏನು ತಿಳಿಸಿ ಕೊಡುತ್ತೀರೋ ಅದರ ಪರಿಶೀಲನೆಯನ್ನು ನಿಮ್ಮಲ್ಲಿ ಮಾಡಿಕೊಳ್ಳಿರಿ. ಮೊದಲು ಸೇವೆಗೆ ಮಾರ್ಕ್ಸ್ ಇರುತ್ತದೆ. ಆದರೆ ಧಾರಣಾ ಸ್ವರೂಪದ ಒಂದು ಮಾರ್ಕ್ (ಅಂಕವು) ಸೇವೆಯ ಹತ್ತು ಮಾರ್ಕ್ಸ್ ಸರಿಸಮನಾಗುತ್ತದೆ. ಒಂದುವೇಳೆ ನೀವು ಜ್ಞಾನವನ್ನು ತಿಳಿಸಿಕೊಡಲು ಸಾಧ್ಯವಿಲ್ಲದಿದ್ದರೂ ನಿಮ್ಮ ಧಾರಣೆಯಿಂದ ಪ್ರಭಾವವನ್ನು ಬೀರಿದರೆ ನಿಮ್ಮ ಸೇವೆಯ ಮಾರ್ಕ್ಸ್ ಕೂಡಿ ಬರುತ್ತವೆಯಲ್ಲವೇ.

ಈಗಿನ ಸಮಯದಲ್ಲಿ ಅನೇಕರು ಏನು ತಿಳಿದುಕೊಂಡಿದ್ದಾರೆಂದರೆ, ತಮಗೆ ಸೇವೆ ಮಾಡುವ ಅವಕಾಶವು ತುಂಬಾ ಕಡಿಮೆ ದೊರೆಯುತ್ತದೆ ಎಂದು. ಸೇವೆಯು ಹೆಚ್ಚು ದೊರೆಯಬೇಕೆಂದು ಬಯಸುತ್ತಾರೆ. ಮೊದಲು ನನಗೆ ಅವಕಾಶವು ದೊರೆಯಬೇಕು, ಅನ್ಯರಿಗೆ ಏಕೆ ಅವಕಾಶವು ದೊರೆಯುತ್ತದೆ? ನನಗೆ ಏಕೆ ದೊರೆಯುವುದಿಲ್ಲ ಎಂದು ಯೋಚಿಸುತ್ತಾರೆ. ಸೇವೆ ಮಾಡುವುದು ತುಂಬಾ ಒಳ್ಳೆಯದಾಗಿದೆ. ಏಕೆಂದರೆ ಒಂದುವೇಳೆ ಬುದ್ಧಿಯು ಫ್ರೀಯಾಗಿದ್ದರೆ (ಬಿಡುವಾಗಿದ್ದರೆ) ವ್ಯರ್ಥ ಯೋಚನೆ ವ್ಯರ್ಥ ಸಂಕಲ್ಪಗಳು ತುಂಬಾ ನಡೆಯುತ್ತವೆ. ಆದ್ದರಿಂದ ಸೇವೆಯಲ್ಲಿ ಬುದ್ಧಿಯು ಬಿಜಿಯಾಗಿ (ಕಾರ್ಯತತ್ಪರವಾಗಿ) ಇರಬೇಕು. ಈ ಸಾಧನವು ಉತ್ತಮವಾಗಿದೆ. ಆದರೆ ಯಾವ ಸೇವೆಯು ನಿಮ್ಮನ್ನು ಗಾಬರಿಯಲ್ಲಿ ಪೇಚಾಟವನ್ನು ತರುತ್ತದೆಯೋ ಅದು ಒಳ್ಳೆಯದಲ್ಲ. ಉದಾಹರಣೆಗಾಗಿ ಸೇವೆಯಿರುತ್ತದೆ. ಸೇವೆ ಮಾಡುವ ಅಕ್ಕರೆ ಉತ್ಸಾಹವು ಒಳ್ಳೆಯದೇ ಆಗಿದೆ. ಆದರೆ ವಿಶ್ವನಾಟಕದ ಅನುಸಾರವಾಗಿ ಅಥವಾ ಪರಿಸ್ಥಿತಿಗಳ ಅನುಸಾರವಾಗಿ ನಿಮಗೆ ಅವಕಾಶವು ದೊರೆಯದಿದ್ದರೆ ಹಾಗೂ ಅನ್ಯರ ಸೇವೆ ಮಾಡುವುದಕ್ಕೆ ಬದಲಾಗಿ ನಿಮ್ಮ ಅವಸ್ಥೆಯೂ ಕೆಳಮಟ್ಟಕ್ಕೆ ಬಂದರೆ ಆ ಸೇವೆಯು ಏನಾಯಿತು? ಆ ಸೇವೆಯ ಪ್ರತ್ಯಕ್ಷ ಫಲವು ಏನು ದೊರೆಯುತ್ತದೆ? ಸತ್ಯವಾದ ಸೇವೆ, ಪ್ರೀತಿಯಿಂದ ಮಾಡುವ ಸೇವೆ, ಸರ್ವರ ಆಶೀರ್ವಾದಗಳೊಂದಿಗೆ ಮಾಡುವ ಸೇವೆಯ ಪ್ರತ್ಯಕ್ಷ ಫಲವಾಗಿ ಖುಷಿಯು ಇರುತ್ತದೆ. ಹಾಗೂ ಒಂದುವೇಳೆ ಸೇವೆಯಲ್ಲಿ ಫೀಲಿಂಗ್ (ಸಂವೇದನೆ, ಭಾವುಕತೆ) ಬಂದುಬಿಟ್ಟರೆ ಇಲ್ಲಿ ಬ್ರಾಹ್ಮಣರು ಫೀಲಿಂಗನ್ನು (ಸಂವೇದನೆಯನ್ನು) ಏನೆಂದು ಕರೆಯುತ್ತೀರಿ? ಫ್ಲೂ (ಛಳಿಜ್ವರ) ಫ್ಲೂ ಜ್ವರವುಳ್ಳವರು ಏನು ಮಾಡುತ್ತಾರೆ? ಮಲಗಿಬಿಡುತ್ತಾರೆ. ಊಟ ಮಾಡುವುದಿಲ್ಲ, ಮಲಗಿ ಬಿಡುತ್ತಾರೆ. ಇಲ್ಲಿಯೂ ಸಹ ಫೀಲಿಂಗ್ ಬಂದರೆ ಊಟವನ್ನು ಬಿಟ್ಟು ಬಿಡುತ್ತಾರೆ. ಅಥವಾ ಮುನಿಸಿಕೊಂಡು ಕುಳಿತು ಬಿಡುತ್ತಾರೆ. ಆದ್ದರಿಂದ ಇದು ಫ್ಲೂ ಆಯಿತಲ್ಲವೇ. ಒಂದುವೇಳೆ ನೀವು ಸಾಧಾರಣ ಸ್ವರೂಪ ಆಗಿದ್ದರೆ, ಸತ್ಯವಾದ ಸೇವಾಧಾರಿ ಆಗಿದ್ದರೆ, ಈಗಿನ ಸಮಯದ ಅನುಸಾರವಾಗಿ, ಪ್ರತ್ಯಕ್ಷತೆಯ ಗಣನೆಯಿಂದ ಈಗ ಸೇವೆಯು ನಿಮ್ಮ ಬಳಿ ಬರುವುದು. ಆದರೆ ಸ್ವಾರ್ಥದಿಂದ ಸೇವೆ ಮಾಡುವವರಾಗಿರಬಾರದು. ಒಂದು ಬಗೆಯದು ಕಲ್ಯಾಣದ ಭಾವನೆಯಿಂದ ಸೇವೆ ಮಾಡುವುದಾಗಿದೆ. ಹಾಗೂ ಇನ್ನೊಂದು ಬಗೆಯದು ಸ್ವಾರ್ಥದಿಂದ ಮಾಡುವ ಸೇವೆಯಾಗಿದೆ. ನನ್ನ ಹೆಸರು, ನನ್ನ ಫೋಟೋ ಸುದ್ದಿ ಪತ್ರಿಕೆಯಲ್ಲಿ ಬಂದು ಬಿಡುವುದು, ರೇಡಿಯೋದಲ್ಲಿ, ಟಿ.ವಿ.ಯಲ್ಲಿ ನನ್ನ

ಭಾಷಣವು ಒಂದು ಬಿಡುವುದು. ಬ್ರಾಹ್ಮಣರಲ್ಲಿ ನನ್ನ ಹೆಸರು ಪ್ರಖ್ಯಾತವಾಗಿ ಬಿಡುವುದು ಬ್ರಾಹ್ಮಣಿಯು ನನ್ನನ್ನು ತುಂಬಾ ಮುಂದಿಡುವರು, ಸಲಹೆ ಕೇಳುವವರು.... ಈ ಎಲ್ಲಾ ಭಾವವು ಸ್ವಾರ್ಥಿ ಸೇವೆಯದಾಗಿದೆ. ಪ್ರಾರಂಭದಲ್ಲಿ ಸ್ಥಾಪನೆಯ ಸಮಯದ ವಾಯುಮಂಡಲವೇ ಬೇರೆ ಇತ್ತು. ಆದರೆ ಈಗ ನೀವು ಸೇವೆಯ ಬೆನ್ನುಹತ್ತಿ ಹೋಗುವುದಿಲ್ಲ. ನಿಮ್ಮ ಬಳಿ ಸೇವೆಯು ತಾನಾಗಿ ನಡೆದು ಬರುವುದು. ಆದ್ದರಿಂದ ಯಾರು ಸತ್ಯವಾದ ಸೇವಾಧಾರಿ ಆಗಿದ್ದಾರೋ ಅವರಿಗೆ ಅನ್ನ ಯಾವ ಸೇವೆಯೂ ದೊರೆಯದಿದ್ದರೆ, ನಿನ್ನ ಚಹರೆಯಿಂದ, ನಿನ್ನ ನಡುವಳಿಕೆಯಿಂದ ಸೇವೆ ಮಾಡು ಎಂದು ಬಾಪ್ದಾದಾರವರು ಹೇಳುತ್ತಾರೆ. ನಿಮ್ಮ ಚೆಹರೆಯು ತಂದೆಯ ಸಾಕ್ಷಾತ್ಕಾರ ಮಾಡಿಸಲಿ. ನಿಮ್ಮ ಚೆಹರೆ, ನಿಮ್ಮ ನಡುವಳಿಕೆಯು ತಂದೆಯ ನೆನಪು ತಂದುಕೊಡಲಿ, ಈ ಸೇವೆಯು ನಂಬರ್ಒನ್ ಆಗಿದೆ. ಯಾರಲ್ಲಿ ಸ್ವಾರ್ಥ ಭಾವ ಇರುವುದಿಲ್ಲವೋ ಅಂತಹ ಸೇವಾಧಾರಿಯಾಗಿರಿ. ನನಗೇ ಅವಕಾಶವು ದೊರೆಯಲಿ, ನನಗೇ ದೊರೆಯಬೇಕು. ಏಕೆ ಸಿಗುವುದಿಲ್ಲ, ದೊರೆಯಬೇಕು..... ಇಂತಹ ಸಂಕಲ್ಪಗಳನ್ನೂ ಸಹ ಸ್ವಾರ್ಥಪರವೆಂದು ಕರೆಯಲಾಗುತ್ತದೆ. ಬ್ರಾಹ್ಮಣ ಪರಿವಾರದಲ್ಲಿ ನಿಮ್ಮ ಹೆಸರು ಪ್ರಸಿದ್ಧವಾಗಿಲ್ಲದೆ ಇರಬಹುದು. ಆದರೆ ತಂದೆಯ ಬಳಿಯಂತೂ ನಿಮ್ಮ ಹೆಸರು ಇದೆಯಲ್ಲವೇ. ಯಾವಾಗ ತಂದೆಯ ಹೃದಯದಲ್ಲಿ ನಿಮ್ಮ ಹೆಸರಿದೆಯೋ ಆಗ ಇನ್ನೇನು ಬೇಕಾಗಿದೆ. ಹಾಗೂ ಕೇವಲ ತಂದೆಯ ಹೃದಯದಲ್ಲಿ ಅಲ್ಲ. ಆದರೆ ಯಾವಾಗ ಅಂತ್ಯದಲ್ಲಿ ಸ್ಥಾನವು ದೊರೆಯುವುದೋ ಆಗ ನಿಮ್ಮ ಸ್ಥಾನವು ಮುಂದೆ ಇರುವುದು. ಏಕೆಂದರೆ ಬಾಪ್ದಾದಾರವರು ಲೆಕ್ಕವನ್ನು ಇಡುತ್ತಾರೆ. ನೀವು ಅರ್ಹರಾಗಿದ್ದರೂ ನಿಮಗೆ ಅವಕಾಶವು ದೊರೆಯದಿದ್ದರೆ ಅದೂ ಸಹ ನಿಮ್ಮ ಖಾತೆಯಲ್ಲಿ ಟಿಪ್ಪಣಿ ಮಾಡಲ್ಪಡುತ್ತದೆ. ಹಾಗೂ ಬೇಡಿ ಅವಕಾಶವನ್ನು ತೆಗೆದುಕೊಂಡರೆ ಸೇವೆಯನ್ನೇನೋ ಮಾಡಿದಿರಿ ಆದರೆ ಮಾರ್ಕ್ಸ್ ಖೋತಾ ಆಗುತ್ತದೆ. ಈ ಧರ್ಮರಾಜನ ಖಾತೆಯೇನೂ ಕಡಿಮೆಯಲ್ಲ, ತುಂಬಾ ಸೂಕ್ಷ್ಮವಾದ ಲೆಕ್ಕಾಚಾರ ಆಗಿದೆ. ಆದ್ದರಿಂದ ನಿಸ್ವಾರ್ಥ ಸೇವಾಧಾರಿಯಾಗಿರಿ. ನಿಮ್ಮ ಸ್ವಾರ್ಥವು ಇರಬಾರದು. ಕಲ್ಯಾಣದ ಸ್ವಾರ್ಥವು ಇರಬೇಕು. ಒಂದುವೇಳೆ ನಿಮಗೆ ಅವಕಾಶವು ದೊರೆತರೆ ಹಾಗೂ ಅನ್ಯರು ತಮಗೂ ಅವಕಾಶವು ದೊರೆತರೆ ತುಂಬಾ ಒಳ್ಳೆಯದು ಎಂದು ತಿಳಿದುಕೊಳ್ಳುತ್ತಾರೆ ಹಾಗೂ ಅವರು ಯೋಗ್ಯರೂ ಆಗಿದ್ದರೆ, ನೀವು ಒಂದುವೇಳೆ ನಿಮ್ಮ ಅವಕಾಶವನ್ನು ಅವರಿಗೆ ಕೊಟ್ಟುಬಿಟ್ಟರೂ ಅದರಲ್ಲಿ ನಿಮ್ಮ ಪಾಲೂ ಜಮಾ ಆಗಿಬಿಡುತ್ತದೆ. ನೀವು ಸೇವೆ ಮಾಡದಿದ್ದರೂ ಯಾರಿಗಾದರೂ ಅವಕಾಶವನ್ನು ಕೊಟ್ಟರೆ ಅದರಲ್ಲಿಯೂ ನಿಮ್ಮ ಪಾಲು ಜಮಾ ಆಗುತ್ತದೆ. ಏಕೆಂದರೆ ಸತ್ಯವಾದ ವಜ್ರ ಆಗಬೇಕಲ್ಲವೇ. ಆದ್ದರಿಂದ ಲೆಕ್ಕವನ್ನೂ ಸಹ ತಿಳಿದುಕೊಂಡು ಬಿಡಿ, ಸರಿಯಾಗಿದೆ. ಆಗಿಬಿಟ್ಟಿತು ಎಂದು ಅಜಾಗರೂಕರಾಗಬೇಡಿರಿ. ಸೂಕ್ಷ್ಮವಾಗಿದೆ. ಲೆಕ್ಕದ ಖಾತೆಯು ತುಂಬಾ ಸೂಕ್ಷ್ಮವಾಗಿದೆ. ತ0ದೆಯು ಏನೂ ಮಾಡಬೇಕಾಗುವುದಿಲ್ಲ. ಆಟೋಮ್ಯಾಟಿಕ್ಕಾಗಿ ಖಾತೆಯಲ್ಲಿ ಸೇರುತ್ತದೆ. ಒಮ್ಮೊಮ್ಮೆ - ಬಾಪ್ದಾದಾರವರು ಮಕ್ಕಳ ಖಾತೆಯನ್ನು ನೋಡಿಯೂ ನೋಡುತ್ತಾರೆ. ಹೀಗೆ ಮೊದಲನೆಯ ಅವಗುಣ ಪರಮತ ಹಾಗೂ ಎರಡನೆಯದಾಗಿ ಪರಚಿಂತನೆಯನ್ನು ತ್ಯಾಗ ಮಾಡಿರಿ.

ಮೂರನೆಯ ಅವಗುಣವು ಪರದರ್ಶನವಾಗಿದೆ. ಅನ್ಯರನ್ನು ನೋಡುವುದರಲ್ಲಿ ಮೆಜಾರಿಟಿ (ಅಧಿಕ ಸಂಖ್ಯೆಯ) ಮಕ್ಕಳು ಬುದ್ಧಿವಂತರಾಗಿದ್ದಾರೆ. ಪರದರ್ಶನ - ಏನು ನೋಡುತ್ತಾರೋ ಅದು ನೋಡಿದ ಮೇಲೆ ಎಲ್ಲಿ ಹೋಗುತ್ತದೆ? ಬುದ್ಧಿಯಲ್ಲಿಯೇ ಹೋಗುತ್ತದೆ, ಯಾರೂ ಯಾರು ಅನ್ಯರನ್ನು ನೋಡುವುದರಲ್ಲಿ ಸಮಯವನ್ನು ಉಪಯೋಗಿಸುತ್ತಾರೋ ಅವರಿಗೆ ತಮ್ಮನ್ನು ನೋಡಿಕೊಳ್ಳಲು ಸಮಯವು ಹೇಗೆ ದೊರೆಯುವುದು? ಅವಗುಣಗಳು, ಲೋಪದೋಷಗಳು ತುಂಬಾ ಇರುತ್ತವೆಯಲ್ಲವೇ. ಹಾಗೂ ಏನು ನ್ಯೂನತೆಗಳಿರುತ್ತವೆಯೋ ಅವು ಗೋಚರವೂ ಆಗುತ್ತವೆ, ಹಾಗೂ ಕೇಳಲೂ ದೊರೆಯುತ್ತವೆ. ಎಷ್ಟು ದೊಡ್ಡ ಸಂಘಟನೆಯಿರುತ್ತದೆಯೋ ಅಷ್ಟು ಅಧಿಕ ಸುದ್ದಿಗಳೂ ಇರುತ್ತವೆ. ತಪ್ಪುಗಳು, ಅವಗುಣಗಳು ಇರಬಾರದು ಎಂದು ಅನೇಕರು ಯೋಚಿಸುತ್ತಾರೆ. ಲೋಪದೋಷಗಳು ಇರಬಾರದು, ತಪ್ಪುಗಳು ಆಗಬಾರದು ಎನ್ನುವುದೇನೋ ಸರಿ. ಆದರೆ ಯಾವುದು ಇರಬಾರದು ಎಂದು ನೀವು ತಿಳಿದುಕೊಂಡಿದ್ದೀರೋ, ಅದನ್ನು ನೋಡಲು ಅಥವಾ ಕೇಳಲು ನೀವು ಸಮಯವನ್ನು ಏಕೆ ವ್ಯರ್ಥ ಮಾಡಿದಿರಿ? ಹಾಗೂ ಈ ಸುದ್ದಿಗಳು ಅಥವಾ ಏನು ತಪ್ಪಗಳು ನಿಮಗೆ ನೋಡಲು ದೊರೆಯುತ್ತವೆಯೋ ಇವೇ ಪರೀಕ್ಷೆಗಳಾಗಿವೆ. ಎಷ್ಟು ದೊಡ್ಡ ಶಿಕ್ಷಣವೋ, ಅಷ್ಟು ದೊಡ್ಡ ಪರೀಕ್ಷೆಗಳೂ ಇರುತ್ತವೆ. ಈ ವಾಯುಮಂಡಲವು ನಿರ್ಮಾಣವಾಗುವುದು ಎಲ್ಲರಿಗೂ ಪರೀಕ್ಷೆಯೂ ಆಗಿದೆ, ಪರಮತ ಅಥವಾ ಪರದರ್ಶನ ಅಥವಾ ಪರಚಿಂತನೆಯಿಂದ ನಿಮ್ಮನ್ನು ಎಷ್ಟು ಸುರಕ್ಷಿತರಾಗಿ ಇಟ್ಟುಕೊಳ್ಳುತ್ತೀರಿ ಎನ್ನುವುದು ಎಲ್ಲರಿಗೂ ಪರೀಕ್ಷೆಯೂ ಆಗಿದೆ. ಎರಡು ಬೇರೆ ಬೇರೆ ವಿಚಾರಗಳಾಗಿವೆ. ಒಂದು ಜವಾಬ್ದಾರಿಯ ಕಾರಣ ಕೇಳಲೂ ಬೇಕಾಗುತ್ತದೆ. ನೋಡಲೂ ಬೇಕಾಗುತ್ತದೆ. ಆದ್ದರಿಂದ ಅದರಲ್ಲಿ ಕಲ್ಯಾಣದ ಭಾವನೆಯಿಂದ ಕೇಳಿರಿ ಹಾಗೂ ನೋಡಿರಿ. ಅದು ಸರಿಯಾಗುತ್ತದೆ. ಜವಾಬ್ದಾರಿಯಿದ್ದರೆ, ಕಲ್ಯಾಣ ಭಾವನೆಯಿದ್ದರೆ ಅದು ಸರಿಯಾಗುತ್ತದೆ ಆದರೆ ನಿಮ್ಮ ಅವಸ್ಥೆಯನ್ನು ಏರುಪೇರಿನಲ್ಲಿ ತಂದುಕೊಂಡು ನೋಡುವುದು, ಕೇಳುವುದು ಅಥವಾ ಯೋಚನೆ ಮಾಡುವುದು ತಪ್ಪಾಗಿದೆ. ಒಂದುವೇಳೆ ನೀವು ನಿಮ್ಮನ್ನು ಜವಾಬ್ದಾರನೆಂದು ತಿಳಿದುಕೊಂಡಿದ್ದರೆ, ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ಮುಂಚೆ ನಿಮ್ಮ ಬ್ರೇಕ್ (ತಡೆಹಾಕುವ ಶಕ್ತಿಯನ್ನು) ಪವರ್ಫುಲ್ (ಶಕ್ತಿಪೂರ್ಣ) ಮಾಡಿಕೊಳ್ಳಿರಿ. ಹೇಗೆ ಬೆಟ್ಟವನ್ನು ಹತ್ತಬೇಕಾದರೆ ಮುಂಚಿತವಾಗಿಯೇ ನಿಮ್ಮ ವಾಹನದ ಬ್ರೇಕನ್ನು ಸರಿಯಾಗಿ ಪರಿಶೀಲನೆ ಮಾಡಿರಿ ಎಂದು ಸೂಚನೆ ಕೊಡುತ್ತಾರೆ. ಹೀಗೆ ಜವಾಬ್ದಾರಿಯೂ ಸಹ ಒಂದು ಉನ್ನತ ಸ್ಥಿತಿಯಾಗಿದೆ. ಜವಾಬ್ದಾರಿಯನ್ನು ವಹಿಸಿಕೊಳ್ಳುವುದಕ್ಕೆ ಅಡ್ಡಿಯಿಲ್ಲ. ಆದರೆ ಮೊದಲು ಏನು ಪರಿಶೀಲನೆ ಮಾಡಿಕೊಳ್ಳಬೇಕೆಂದರೆ ಒಂದು ಸೆಕೆಂಡಿನಲ್ಲಿ ಬಂದುವು (ಫುಲ್ ಸ್ಟಾಪ್) ಬೀಳುತ್ತದೆಯೋ ಎಂಬುದನ್ನು. ಅಥವಾ ಬಿಂದುವನ್ನು (ಫುಲ್ ಸ್ಟಾಪ್) ಹಾಕಲು ಹೋದರೆ, ಕ್ವೆಶ್ಚನ್ ಮಾರ್ಕ್ (ಪ್ರಶ್ನಾರ್ಥಕ ಚಿಹ್ನೆಯು) ಬಿದ್ದು ಬಿಡುತ್ತದೆಯೋ? ಅದು

ತಪ್ಪಾಗಿದೆ. ಅದರಲ್ಲಿ ಸಮಯ ಹಾಗೂ ಶಕ್ತಿಯು ವ್ಯರ್ಥವಾಗಿ ಬಿಡುತ್ತದೆ. ಆದ್ದರಿಂದ ಮೊದಲು ನಿಮ್ಮ ಬ್ರೇಕನ್ನು ಶಕ್ತಿಪೂರ್ಣ ಮಾಡಿ ಕೊಳ್ಳಿರಿ. ನೋಡಿದಿರಿ, ಕೇಳಿದಿರಿ ಹಾಗೂ ಎಷ್ಟು ಸಾಧ್ಯವೋ ಅಷ್ಟು ಕಲ್ಯಾಣ ಮಾಡಿದಿರಿ, ಆಮೇಲೆ ಫುಲ್ ಸ್ಟಾಪ್ ಹಾಕಿಬಿಡಿ. ಒಂದುವೇಳೆ ಇಂತಹ ಸ್ಥಿತಿಯಿದ್ದರೆ ಜವಾಬ್ದಾರಿಯನ್ನು ತೆಗೆದುಕೊಳ್ಳಿರಿ. ಇಲ್ಲದಿದ್ದರೆ ನೋಡುತ್ತಿದ್ದರೂ ನೋಡಬೇಡಿರಿ, ಕೇಳುತ್ತಿದ್ದರೂ ಕೇಳಬೇಡಿರಿ. ಸ್ವಚಿಂತನೆಯಲ್ಲಿ ಇರಿ, ಲಾಭವು ಇರುವುದು ಇದರಲ್ಲಿಯೇ. ಆದ್ದರಿಂದ ಇಂದಿನ ಪಾಠವು ಯಾವುದಾಯಿತು? ಪರಮತ, ಪರಚಿಂತನೆ ಹಾಗೂ ಪರದರ್ಶನ ಈ ಮೂರು ದೋಷಗಳಿಂದ ಮುಕ್ತರಾಗಿರಿ. ಹಾಗೂ ಒಂದು ವಿಶೇಷತೆಯನ್ನು ಧಾರಣೆ ಮಾಡಿರಿ. ಆ ಒಂದು ವಿಶೇಷತೆಯು ಪರೋಪಕಾರಿ ಆಗುವುದಾಗಿದೆ. ಮೂರು ಪ್ರಕಾರದ ಪರವನ್ನು ಸಮಾಪ್ತಿ ಮಾಡಿರಿ ಹಾಗೂ ಒಂದು ಪ್ರಕಾರದ ಪರ-ಪರ-ಉಪಕಾರಿ ಆಗಿರಿ. ಆಗುವುದು ಬರುತ್ತದೆಯೇ? ಯಾವ ಅವಗುಣಗಳಿಂದ ಮುಕ್ತರಾಗುವಿರಿ? ಮಾತೆಯರು ಏನು ಮಾಡುವಿರಿ? ಮಕ್ಕಳ ಉಪಕಾರ ಆಗುವಿರೋ ಅಥವಾ ಪರೋಪಕಾರಿ ಆಗುವಿರೋ? ಸರ್ವ ಉಪಕಾರಿ ಆಗಿರಿ. ಸಹಜವಾಗಿದೆಯೋ ಅಥವಾ ಕಷ್ಟಕರವಾಗಿದೆಯೋ? ಒಳ್ಳೆಯದು.

ನಾಲ್ಕೂ ಕಡೆಯ ಸರ್ವ ವಿಶ್ವದ ವಿಶೇಷ ಆತ್ಮರಿಗೆ ಸದಾ ಸ್ವಚಿಂತನೆ, ಜ್ಞಾನಚಿಂತನೆ ಮಾಡುವ ಶ್ರೇಷ್ಠ ಆತ್ಮರಿಗೆ, ಸದಾ ತಂದೆಯ ಶ್ರೇಷ್ಠ ಮತದಂತೆ ಪ್ರತಿಯೊಂದು ಸಂಕಲ್ಪ, ನುಡಿ ಹಾಗೂ ಕರ್ಮವನ್ನು ಮಾಡುವ ಸಮೀಪ ಆತ್ಮರಿಗೆ, ನಾಲ್ಕೂ ಕಡೆಯ ಡೈಮಂಡ್ ಜೂಬಿಲಿಯ ಸಲುವಾಗಿ ಸ್ವಯಂ ತಮ್ಮನ್ನು ಹಾಗೂ ಸೇವೆಯನ್ನು ವೃದ್ಧಿ ಮಾಡುವ ವಿಶೇಷ ಆತ್ಮರಿಗೆ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ.

ವರದಾನ: ವರದಾನ: ಮಹಾವೀರರಾಗಿ ಸಂಜೀವಿನಿ ಭೂಟಿಯ ಮುಖಾಂತರ ಮೂರ್ಚಿತರನ್ನು ಸೂರ್ಜಿತರನ್ನಾಗಿ ಮಾಡುವಂತಹ ಶಕ್ತಿವಾನ್ ಭವ.

ಹೇಗೆ ಸೂರ್ಯ ಸ್ವಯಂ ಶಕ್ತಿಶಾಲಿಯಾಗಿದ್ದು ನಾಲ್ಕೂ ಕಡೆ ತನ್ನ ಶಕ್ತಿಯಿಂದ ಪ್ರಕಾಶವನ್ನು ಹರಡುತ್ತಾನೆ, ಅದೇ ರೀತಿ ಶಕ್ತಿವಂತರಾಗಿ ಅನೇಕರಿಗೆ ಸಂಜೀವನಿ ಭೂಟಿ ಕೊಟ್ಟು ಮೂರ್ಚಿತರನ್ನು ಸೂರ್ಜಿತರನ್ನಾಗಿ ಮಾಡುವಂತಹ ಸೇವೆ ಮಾಡುತ್ತಿದ್ದಲ್ಲಿ, ಹೇಳಲಾಗುವುದು ಮಹಾವೀರರು. ಸದಾ ಸ್ಮೃತಿಯನ್ನಿಟ್ಟುಕೊಳ್ಳಿ ನಾವು ವಿಜಯಿಯಾಗಿರಬೇಕು ಮತ್ತು ಎಲ್ಲರನ್ನೂ ವಿಜಯಿಯಾಗಿ ಮಾಡಬೇಕು. ವಿಜಯಿಯನ್ನಾಗಿ ಮಾಡಲು ಸಾಧನವಾಗಿದೆ ಬಿಜಿಯಾಗಿರುವುದು. ಸ್ವ-ಕಲ್ಯಾಣ ಅಥವಾ ವಿಶ್ವ ಕಲ್ಯಾಣದ ಕಾರ್ಯದಲ್ಲಿ ಬಿಜಿಯಾಗಿದ್ದಾಗ ವಿಘ್ನ-ವಿನಾಶಕ ವಾಯುಮಂಡಲ ರಚನೆ ಆಗುತ್ತಾ ಹೋಗುವುದು.

ಸ್ಲೋಗನ್: ಸ್ಲೋಗನ್: ಹೃದಯ ಸದಾ ಒಬ್ಬ ಹೃದಯರಾಮನೊಂದಿಗೆ ಜೋಡಿಸುವುದು - ಇದೇ ಸತ್ಯ ತಪಸ್ಯಾ ಆಗಿದೆ.